ಡಾ. ವಿ. ಪುಗಳೇಂದಿ, ಬಳ್ಳಾರಿ

*‘ವಾಚ್ ದ ಕ್ರೋ ಆನ್ ದ ಕಾರ್’ ಅಂತ ಸಿನಿಮಾ ನಿರ್ಮಿಸಲಿದ್ದೇನೆ. ಸಿಎಂ ಕ್ಲಾಪ್ ಹೊಡೆದು ಪ್ರಾರಂಭಿಸಿಕೊಡುವರೆ?*



ಇಲ್ಲ; ಕ್ಲಾಪ್ ಹೊಡೆದರೆ ಕಾಗೆ ಹಾರಿಹೋಗುತ್ತದಲ್ಲ!

ಅನ್ನಪೂರ್ಣ, ಶಿವಮೊಗ್ಗ

*ಮಾತುಗಳೇ ಪ್ರಧಾನವಾಗಿರುವ ಹೆಂಗಸರನ್ನು ಮೌನವಾಗಿಸಿರುವ ಟಿವಿ ಧಾರಾವಾಹಿಗಳ ನಿರ್ದೇಶಕರಿಗೆ ಯಾವ ಪ್ರಶಸ್ತಿ ಸೂಕ್ತ?*

ತುಟಿಗಳು ಅಂಟಿಕೊಳ್ಳುವಂತೆ ಮಾಡಿರುವುದರಿಂದ ‘ಲಿಪ್ ಸ್ಟಿಕ್’ ಪ್ರಶಸ್ತಿ.

ಆರತಿ ಘಟಿಕಾರ್, ದುಬೈ

*ಜೀವನೋತ್ಸಾಹವನ್ನೂ ಅಂಗಡಿಯಲ್ಲಿ ಕೊಳ್ಳುವಂತಿದ್ದರೆ ಹೇಗಿರುತ್ತಿತ್ತು?*

ಹಳೇ ಸ್ಟಾಕ್ ದೊರಕಿ ಬೀಸುಕಲ್ಲಿನಲ್ಲಿ ಅಡಿಗೆ ಮಾಡುವುದರಲ್ಲಿ ಉತ್ಸಾಹ ಕಾಣುವ ಸ್ಥಿತಿ ಉದ್ಭವಿಸುತ್ತಿತ್ತು.

ಮುರಲೀಧರ ಕುಲಕರ್ಣಿ, ಬೀದರ್

*ಕಚ್ಚುವುದಕ್ಕೆ ಮೊದಲು ಸೊಳ್ಳೆ ಕಿವಿಯ ಹತ್ತಿರ ಬಂದು ಏನು ಹೇಳುತ್ತದೆ?*




ಅದು ಹೇಳುವುದಲ್ಲ; ಊಟಕ್ಕೆ ಮುಂಚೆ ಮಾಡುವ ಪ್ರೇಯರ್!

ಎಸ್.ಜಿ. ಕರನಂದಿ, ಹುನಗುಂದ

*ಹಿಂದಿನ ಮಹಾಮುನಿಗಳ ಆಶ್ರಮಗಳಿಗೂ, ಇಂದಿನ ಹೆದ್ದಾರಿಯ ಢಾಬಾಗಳಿಗೂ ಏನು ವ್ಯತ್ಯಾಸ?*

ಅವುಗಳಲ್ಲಿ ಸತ್ಕಾರ ದೊರೆಯುತ್ತಿತ್ತು. ಇವುಗಳಲ್ಲಿ ಸಖತ್ ಖಾರ!

ದಿನೇಶ್, ಗುಡ್ಡದೂರು

*ರಾಜಕಾರಣಿಗಳು ಸತ್ತನಂತರ ಸ್ವರ್ಗ ಸೇರುತ್ತಾರೋ, ನರಕ ಸೇರುತ್ತಾರೋ?*

ಎರಡೂ ಅಲ್ಲ; ತಿಂಗಳುಗಟ್ಟಲೆ ಮನೆಯ ಹತ್ತಿರದ ರಸ್ತೆಯ ಫ್ಲೆಕ್ಸ್ ಬೋರ್ಡ್ ಸೇರುತ್ತಾರೆ.

ಎಂ.ಎ. ಕುಮಾರ್, ಬೆಂಗಳೂರು

*ಸೀರೆಯ ಸೆರಗಿಗೂ, ದುಪ್ಪಟ್ಟಕ್ಕೂ ಏನು ವ್ಯತ್ಯಾಸ?*

ಸೆರಗು ತುರುಬು; ದುಪ್ಪಟ್ಟ ಚೌರಿ.

ವಿ. ಹೇಮಂತ ಕುಮಾರ್, ಬೆಂಗಳೂರು

*ಹುಡುಗಿಯರು ಮುಖಕ್ಕೆ ಎಷ್ಟೇ ಚೆನ್ನಾಗಿ ಮೇಕಪ್ ಮಾಡಿಕೊಂಡಿದ್ದರೂ ಹುಡುಗರ ದೃಷ್ಟಿ ಬೇರೆ ಕಡೆಯೇ ಇರುತ್ತಲ್ಲ, ಏಕೆ?*

ಸೃಷ್ಟಿಯಿಂದ ಮಾನವನಾದರೂ ದೃಷ್ಟಿಯಿಂದ ಪಶುವಾದ್ದರಿಂದ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಮಹಿಳೆ ಸಾರ್ವಜನಿಕವಾಗಿ ಸಿಎಂಗೆ ಮುತ್ತಿಡುವುದು ಮಹಿಳಾ ಸಬಲೀಕರಣದ ಮೊದಲ ಹೆಜ್ಜೆಯಂತೆ?*

ಅಭಿಮಾನಿಗಳ ಮುತ್ತಿಗೆಗೂ ಮುತ್ತಿಗೂ ಒಂದಕ್ಷರ ವ್ಯತ್ಯಾಸ.

ಬೆಟ್ಟಹಳ್ಳಿ ಗೋಪಿನಾಥ, ಸೂಲಿಬೆಲೆ

*ಇಲ್ಲೊಬ್ಬ ಮದುವೆಯಾದ 3 ತಿಂಗಳಿಗೆ ತಂದೆಯಾಗಿದ್ದಾನೆ. ಇದರ ಗುಟ್ಟೇನು?*

ಹೆಂಡತಿ ಹೆರಲಾರಳಂತೆ. ದತ್ತು ತೆಗೆದುಕೊಂಡಿದ್ದಾನೆ.

ಕೆ.ಎಂ. ಲಿಂಗರಾಜು, ನಂಜನಗೂಡು

*ಪ್ರೇಯಸಿಯ ಮೇಲಿನ ಪ್ರೀತಿಗೂ, ಪತ್ನಿಯ ಮೇಲಿನ ಪ್ರೀತಿಗೂ ಏನು ವ್ಯತ್ಯಾಸ?*

ಒಂದು ಕಾರಂಜಿ; ಮತ್ತೊಂದು ಪ್ರಶಾಂತ ನದಿ.

ದ್ವಾರಕಾನಾಥ್, ಬೆಂಗಳೂರು

*ಸಾರಿಗೆ ಸಪ್ತಾಹ ಇದೆ. ಹುಳಿಗೆ ಯಾಕಿಲ್ಲ?*

ಎಲ್ಲ ವಾರಗಳೂ ಹುಳಿಯದೇ ಸೀರಿಯಲ್‌ಗಿಂತ ಹುಳಿ ಇರ್ಪುದೇಂ ಜಗದೊಳ್?

ಮಲ್ಲನಗೌಡ ಪಾಟೀಲ, ರಂಭಾಪೂರ

*ಗುಡಿಯ ಒಳಗೆ ಗಂಟೆ ಏಕೆ ಕಟ್ಟಿರುತ್ತಾರೆ?*

ಸೊಗಸಾದ ಅಭಿಷೇಕ, ನೈವೇದ್ಯಗಳಿಂದ ಸಂಪ್ರೀತನಾಗಿ ದೇವ ನಿದ್ರಿಸಿಬಿಟ್ಟಾನೆಂದು ಮುನ್ನೆಚ್ಚರಿಕೆ.

## ಬಹುಮಾನಿತ ಪ್ರಶ್ನೆ

ಕು.ಗೋ., ಉಡುಪಿ

*ಸಿನಿಮಾ ನಟಿಯರನ್ನು ತಾರೆ ಎನ್ನುವುದೇಕೆ?*

ಫ್ಯಾನ್‌ಗಳು ಸೆಲ್ಫಿ ತಾರೆ, ಆಟೋಗ್ರಾಫ್ ತಾರೆ, ಫ್ಲೈಯಿಂಗ್ ಕಿಸ್ ತಾರೆ, ಅದು ತಾರೆ, ಇದು ತಾರೆ, ಎನ್ನುವುದರಿಂದ....

ಸಂದೇಶ ಎಂ., ಗೋಳಿಮಜಲು ಗ್ರಾಮ

*ನಿಮ್ಮ ಒಳ್ಳೆಯ ಸಾಧನೆ ಯಾವುದು ಸಾರ್?*

ಅಂಗಸಾಧನೆ.

ಪಿ.ಗೋವಿಂದರಾಜ್, ಶಿವಮೊಗ್ಗ

*ಮಾತು ಬೆಳ್ಳಿ; ಮೌನ ಬಂಗಾರ; ನಗು?*

ಆಭರಣ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರಪ್ಪಾ! ಸಂಬಳವಿಲ್ಲದ ವೃತ್ತಿಗೆ ನಿವೃತ್ತಿಯೂ ಇಲ್ಲವಂತೆ ಎಂದು ಗೋಳಾಡುವವರಿಗೆ ನಿಮ್ಮ ಸಂದೇಶ?*

ಇದಕ್ಕೆ ಗೋಳಾಡಬಾರದು; ಸಂತೋಷ ಪಡಿ. ನೀವು ದೇವರ ಸಮಾನ!

ಶಾಂತಾ ರಾಘವೇಂದ್ರ, ಹಂಗಳೂರ

*ರಾಜಕಾರಣಿಗಳು ಗೆದ್ದುಬಂದಾಗ ಹಾರ ಹಾಕುತ್ತಾರೆ; ಸತ್ತವರಿಗೂ ಹಾರ; ದೇವರಿಗೂ ಹಾರ. ಏನು ಇದರ ಮರ್ಮ?*



ವಾಸನೆಯೇ ಕಾರಣ; ಆಶ್‌ವಾಸನೆ; ದುರ್ ವಾಸನೆ; ಇವುಗಳಿಂದ ಕಾಯೋ ಶ್ರೀನಿವಾಸನೆ!

ಬಿ. ಚಂದ್ರೇಗೌಡ, ಬೆಂಗಳೂರು

*ಮದುವೆ ಏಳೇಳು ಜನ್ಮದ ಅನುಬಂಧವಾದರೆ ವಿಚ್ಛೇದನ?*

ಏಳೇಳು, ಎದ್ದು ನಡೀತಾ ಇರು, ಗೆಟ್ ಔಟ್... ಎಂಬ ರೋದನ.

■ ರಾಮ್